ದಿನಾಂಕ 29/11/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಶ್ರೀ ಪಿ.ಆರ್.ಪಿ. ಪ್ರತಿವಾದಿ ಪರ ವಕೀಲರಿಂದ**

ನಾನು ಈ ದಾವೆಯನ್ನು ಸರ್ವೆ ನಂ- 43/2 ಕ್ಕೆ ಹೂಡಿರುತ್ತೇನೆ. ನನ್ನ ತಾತನ ಹೆಸರು ಈರೇಜಪ್ಪ ಇರುತ್ತಾರೆ. ನನ್ನ ತಂದೆ ಹೆಸರು ಹೀರಪ್ಪ. ನಾವು ವಾಲ್ಮಿಕಿ ಜನಾಂಗಕ್ಕೆ ಸೇರಿರುತ್ತೇವೆ. ಗಂಪಲಹಳ್ಳಿ ಗ್ರಾಮದ ವಾಲ್ಮಿಕಿ ಜನಾಂಗದ ಈರೇಜಪ್ಪ ಮತ್ತು ಹೀರಪ್ಪ ಇವರು ನನ್ನ ತಾತ ಮತ್ತು ತಂದೆ ಇರುತ್ತಾರೆ ಎಂದರೆ ಸರಿ. ಸರ್ವೆ ನಂ-43/1, 41, 45, 43/1, 44, 46, 47 ಮತ್ತು 48 ಈ ಜಮೀನುಗಳು ಜೋಡಿ ಗ್ರಾಮಕ್ಕೆ ಸೇರಿದ್ದವು ಎಂದರೆ ಸರಿ. ಮೇಲೆ ಹೇಳಿದ ಆಸ್ತಿಗಳು ನಮ್ಮ ಊರಿನ ಬ್ರಾಹ್ಮಣ ಜಿ.ಆರ್. ಸುಬ್ರಮಣ್ಯ ಇವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಜಿ.ಆರ್ ಸುಬ್ರಮಣ್ಯ ನಿಮ್ಮ ಊರಿನವರೇ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

2. ದಾವಾ ಆಸ್ತಿಯ ಪೂ-ಪಶ್ಚಿಮ ದಿಕ್ಕಿಗೆ ಜಿ.ಆರ್. ಸುಬ್ರಮಣ್ಯ ರವರ ಆಸ್ತಿ ಇತ್ತು ಎಂದರೆ ಸಾಕ್ಷಿ ಮೊದಲು ಇತ್ತು ಎಂದು ಉತ್ತರಿಸಿರುತ್ತಾರೆ. ನನಗೆ ನಮ್ಮ ಊರಿನ ತಿಪ್ಪಣ್ಣ ಎನ್ನುವವರ ಪರಿಚಯ ಇರುವುದಿಲ್ಲ, ಆದರೆ ಅವರು ನಮ್ಮ ಊರಿನವರು ಇರುತ್ತಾರೆ. ನಮ್ಮ ಊರಿನ ಶ್ರೀಕಂಠಶಾಸ್ತ್ರಿ ಇವರ ಪರಿಚಯ ಇರುತ್ತಾರೆ. ಪ್ರತಿವಾದಿ ಮತ್ತು ಅವರ ತಂದೆ ಪರಿಚಯ ಇರುತ್ತಾರೆ. ನನ್ನ ತಾತ ಮತ್ತು ನನ್ನ ತಂದೆ ಸೇರಿಕೊಂಡು ದಿ.12/07/1967 ರಂದು ದಾವಾ ಆಸ್ತಿಯನ್ನು ಪ್ರತಿವಾದಿಗಳ ತಂದೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಬೇರೆ ಸರ್ವೆ ನಂಬರ್ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ-71/1 ಬಿ ಪೋಡಿನ ಜಮೀನು ನಿಮಗೆ ಸೇರಿತ್ತಾ ಎಂದರೆ ಸಾಕ್ಷಿ ಅ ಜಮೀನು ನಮಗೆ ಸೇರಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

3. ನನ್ನ ತಂದೆ ಪ್ರತಿವಾದಿಗಳಿಗೆ ಮಾರಾಟ ಮಾಡಿದ ಜಮೀನುಗಳಿಗೆ ನಮ್ಮ ಊರಿನ ಶ್ರೀಕಂಠಶಾಸ್ತ್ರಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪತ್ರಕ್ಕೆ ನಮ್ಮ ತಂದೆ ಮತ್ತು ನಮ್ಮ ತಾತ ಹೆಬ್ಬೆಟ್ಟು ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಜಮೀನಿಗೆ ನಾವು ನೋಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆ ಮತ್ತು ತಾತ ಪ್ರತಿವಾದಿಗಳಿಗೆ ಮಾರಾಟ ಮಾಡುವ ಕಾಲಕ್ಕೆ ಸರ್ವೆ ನಂ-43/2 ಎಂದು ಬರೆಯುವ ಬದಲಾಗಿ ಸರ್ವೆ ನಂ- 71/1 ಬಿ ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ವಿಸ್ತೀರ್ಣ 2 ಎಕರೆ 29 ಗುಂಟೆ ಬರೆಯುವ ಬದಲಾಗಿ 2 ಎಕರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ಪ್ರತಿವಾದಿಗಳ ತಂದೆ ಸಾಕಷ್ಟು ಭಾರಿ ನಮ್ಮ ತಂದೆ ಮತ್ತು ನಮ್ಮ ತಾತನನ್ನು ತಿದ್ದುಪಡಿ ಪತ್ರ ಮಾಡಿಕೊಡುವಂತೆ ಕೆಳಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಆ ಸರ್ವೆನಂಬರ್ ಬೇರೆ ಈ ಸರ್ವೆನಂಬರ್ ಬೇರೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ಮತ್ತು ತಾತ ತೀರಿಕೊಂಡ ನಂತರ ಪ್ರತಿವಾದಿಗಳು ಬಂದು ನಮ್ಮನ್ನು ತಿದ್ದುಪಡಿ ಪತ್ರ ಮಾಡಿಕೊಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಿ.12/07/1967 ರಿಂದ ನನ್ನ ತಾತ ಮತ್ತು ನನ್ನ ತಂದೆ ಮಾರಾಟ ಮಾಡಿದಾಗಿನಿಂದ ಪ್ರತಿವಾದಿಗಳ ತಂದೆ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ ತಂದೆ ತೀರಿಕೊಂಡ ನಂತರ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರದ ವಿಚಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳು ಮತ್ತು ಅವರ ತಂದೆ ವಿದ್ಯಾವಂತರು ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಚಿಕ್ಕತಿಮ್ಮಪ್ಪನಿಗೆ 4 ಜನ ಮಕ್ಕಳು ಎಂದರೆ ಸರಿ. ಅವರ ಹೆಸರುಗಳು ಚೆನ್ನಪ್ಪ , ಸೂರಪ್ಪ , ಜಯರಾಮಪ್ಪ ಮತ್ತು ತಿಪ್ಪಣ್ಣ ಇರುತ್ತಾರೆ.

5. ದಿ.12/07/1967 ರಂದು ಸರ್ವೆ ನಂ-43/2 ರ ಜಮೀನುಗಳನ್ನು ಜಿ.ಆರ್ ಸುಬ್ರಮಣ್ಯ ರವರ ಕಡೆಯಿಂದ ಪ್ರತಿವಾದಿಗಳ ತಂದೆ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸರ್ವೆ ನಂ- 72 ಮತ್ತು 73 ಜಮೀನಿನ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ- 43/2, 1972 ರಿಂದ 1979 ರವರೆಗೆ ಕಾಲಂ ನಂ-9 ರಲ್ಲಿ ಹೀರಪ್ಪ ಬಿನ್ ಈರೆಜಪ್ಪ ಎಂದು ನಮೂದು ಇರುತ್ತದೆ ಮತ್ತು ಕಾಲಂ 12 ರಲ್ಲಿ ಚಿಕ್ಕತಿಮ್ಮಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಚಿಕ್ಕತಿಮ್ಮಪ್ಪ ಪ್ರತಿವಾದಿಗಳ ತಂದೆ ಎಂದರೆ ಸರಿ. ಸರ್ವೆ ನಂ-43/2 ರ ಆಸ್ತಿಗೆ ರಸ್ತೆ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. 1967 ರ ಇತ್ತೀಚೆ ಕಂಪನಹಳ್ಳಿಯಿಂದ ದೇವಸ್ಥಾನಕ್ಕೆ ರಸ್ತೆ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ- 43/2 ರ ಪೂ-ದಕ್ಷಿಣಕ್ಕೆ ಪ್ರತಿವಾದಿಗಳ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂ-43/2 ರ ಆಸ್ತಿ ಸರ್ವೆ ನಂ-43/1, 41, 45, 43/1, 44, 46, 47 ಮತ್ತು 48 ರ ಮದ್ಯೆ ಬರುತ್ತದೆ ಎಂದರೆ ಸರಿ. ಪ್ರತಿವಾದಿಗಳು ಅವಿದ್ಯಾವಂತರು ಇರುವ ಕಾರಣ ತಿದ್ದುಪಡಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ತಂದೆ ಮತ್ತು ನನ್ನ ಹೆಸರಿಗೆ ಖಾತೆ ಇರುವ ಕಾರಣದಿಂದಾಗಿ ನಾವು ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಿ.12/07/1967 ರಿಂದ ಇಲ್ಲಿಯವರೆಗೂ ನಾನು ಆಗಲೀ ನನ್ನ ತಂದೆ ಆಗಲೀ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ತಾತ 1967 ಮಾರಾಟ ಮಾಡಿದಾಗಿನಿಂದ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ